**<u>ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ/ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ-</u>**

ನಾನು ಎಸ್.ಎಸ್ ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸ್ವಂತ ಸ್ಥಳ ಬೆಂಗಳೂರು. ನನಗೆ 1991 ರಲ್ಲಿ ನನ್ನ ಮದುವೆ ಆಗಿರುತ್ತದೆ. ಅಲ್ಲಿಂದ ನಾನು ಹುಣಸೂರಿನಲ್ಲಿ ವಾಸ ಇದ್ದೇನೆ. ನನ್ನ ಮಾವನ ಹೆಸರು ಹೆಚ್.ಎಂ. ಸುಬ್ಬಕೃಷ್ಣಶೆಟ್ಟಿ, ಅತ್ತೆ ಹೆಸರು. ಸರಸ್ವತಮ್ಮ. ಅವರಿಬ್ಬರೂ 8 ಜನ ಮಕ್ಕಳು. ದಾವಾ ಎ ಷಡ್ಯೂಲ್ ಸ್ವತ್ತು ನನ್ನ ಮಾವನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಅವರ 8 ಜನ ಮಕ್ಕಳಿಗೂ ಸೇರಬೇಕಾದ ಸ್ವತ್ತು ಎಂದರೆ ಸರಿ. ಅವರ 8 ಜನ ಮಕ್ಕಳು ಯಾರೂ ಬಂದು ನಮ್ಮ ಜೊತೆ ಕೇಸ್ ಮಾಡಿಲ್ಲ ಎಂದರೆ ಸರಿ. ಸದರಿ ಹೆಚ್. ಎಂ. ಸುಬ್ಬಕೃಷ್ಣಶೆಟ್ಟಿ ಮತ್ತು ಸರಸ್ವತಮ್ಮ 6 ಜನ ಹೆಣ್ಣು ಮಕ್ಕಳು ಜೀವಂತ ಇರುತ್ತಾರೆ, ಅವರ ಇಬ್ಬರು ಗಂಡು ಮಕ್ಕಳು ತೀರಿಕೊಂಡಿರುತ್ತಾರೆ. ನಮ್ಮ ಮಾವನವರು 1994 ರಲ್ಲಿ ತೀರಿಕೊಂಡಿರುತ್ತಾರೆ. ಆಗ ಅವರ ವಯಸ್ಸು 80 ಆಗಿತ್ತು. ನಮ್ಮ ಅತ್ತೆ 2005 ರಲ್ಲಿ ರಲ್ಲಿ ತೀರಿಕೊಂಡಿರುತ್ತಾರೆ. ಆಗ ಅವರ ವಯಸ್ಸು 70 ವರ್ಷ ಆಗಿರಬಹುದು.

ನಮ್ಮ ಮಾವನ ಇಬ್ಬರು ಗಂಡು ಮಕ್ಕಳು ನನ್ನ ಮದುವೆಯ 3 ವರ್ಷಗಳ ಮುಂಚೆಯ ಪ್ರತ್ಯೇಕವಾಗಿದ್ದರು. ನನ್ನ ಅತ್ತೆ ಮತ್ತು ಮಾವ ವಯೋ ಸಹಜ ಕಾಯಿಲೆಯಿಂದ ತೀರಿಕೊಂಡಿರುತ್ತಾರೆ. ನಮ್ಮ ಭಾವ ಹೆಚ್ ಎಸ್ ವಿವೇಕಾನಂದ ರವರು ಗಂಟಲು ಕ್ಯಾನ್ಸರ್ ನಿಂದ ತೀರಿಕೊಂಡಿರುತ್ತಾರೆ. ನಮ್ಮ ಗಂಡನಿಗೆ ಬಿ.ಪಿ ಮತ್ತು ಶುಗರ್ ಇದ್ದು, ಕೋವಿಡ್ ಸಮಯದಲ್ಲಿ ಆಸ್ಪತ್ರೆಯಲ್ಲಿ ಅವರಿಗೆ ಹಾಕಿದಂತಹ ಆಕ್ಸಿಜನ್ ತೆಗೆದಿದ್ದರಿಂದ ತೀರಿಕೊಂಡಿದ್ದರು. ಎ ಷಡ್ಯೂಲ್ ಸ್ವತ್ತಿನಲ್ಲಿ 1975 ರಲ್ಲಿ ನಮ್ಮ ಮಾವನವರು ಮನೆ ಕಟ್ಟಿಸಿದ್ದರು ಎಂದು ನಾನು ತಿಳಿದುಕೊಂಡಿದ್ದೇನೆ. ಸದರಿ ಎ ಷಡ್ಯೂಲ್ ಸ್ವತ್ತಿನ ಮನೆಯನ್ನು 1948 ರಲ್ಲಿ ನಮ್ಮ ಮಾವ ಖರೀದಿ ಮಾಡಿದ್ದರು ಎಂದರೆ ಸರಿ. ಎ ಷಡ್ಯೂಲ್ ಮನೆಯ ಪಶ್ಚಿಮಕ್ಕೆ ಸರಸ್ವತಿ ಫ್ಲೋರ್ ಮಿಲ್ ಇದೆ ಎಂದರೆ ಸರಿ. ನಾನು ಹುಟ್ಟುವುದಕ್ಕಿಂತ ಮೊದಲೆ

ಸದರಿ ಮನೆಯನ್ನು ನಮ್ಮ ಮಾವ ಖರೀದಿಸಿದ್ದರು ಎಂದರೆ ಸರಿ. ಎ ಷಡ್ಯೂಲ್ ಸ್ವತ್ತಿನ ಮನೆಯನ್ನು ಮಾವ ಖರೀದಿ ಮಾಡಿದ್ದರು ಅದರ ಪಶ್ಚಿಮಕ್ಕೆ ಇರುವ ಬಿ ಷಡ್ಯೂಲ್ ಸ್ವತ್ತನ್ನು ಎಂ. ಎಸ್ ನಾಗರಾಜಶೆಟ್ಟಿ ರವರು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಎರಡೂ ಮನೆಗಳಿಗೂ ಜಂಟಿ ಗೋಡೆ ಇತ್ತು ಎಂದರೆ ಸರಿಯಲ್ಲ.

ದಿಃ 06.06.1948 ರ ಕ್ರಯ ಪತ್ರ ನಮ್ಮ ಬಳಿ ಇರುವುದಿಲ್ಲ, ಇನ್ನು ಪಾಲಾಗದ ಕಾರಣ ಅದು ಹೆಣ್ಣು ಮಕ್ಕಳ ಬಳಿ ಇರುತ್ತದೆ. ಸದರಿ ಕ್ರಯ ಪತ್ರದಲ್ಲಿ ನಮ್ಮ ಸ್ವತ್ತಿನ ಪಶ್ಚಿಮಕ್ಕೆ ಎಂ.ಎಸ್ ನಾಗರಾಜಶೆಟ್ಟಿ ರವರ ಹಿಟ್ಟಿನ ಗಿರಣಿ ಇದೆ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.ಸದರಿ ಪತ್ರದ ಪ್ರತಿಯನ್ನು ಪಡೆದು ಚಕ್ಕುಬಂದಿ ನೋಡಲು ನನಗೆ ಯಾವುದೆ ತೊಂದರೆ ಇರಲಿಲ್ಲ. ನಮ್ಮ ಮನೆಯ ಮತ್ತು 1 ನೇ ಪ್ರತಿವಾದಿಯರ ಗಿರಣಿ ಮಧ್ಯದಲ್ಲಿ ಮನೆ ಕಟ್ಟುವಾಗ ತಮ್ಮದೆ ಗೋಡೆಯನ್ನು ಕಟ್ಟಿಕೊಂಡಿದ್ದರು ಎಂದರೆ ಸರಿಯಲ್ಲ, ಅದು ನಮ್ಮ ಗೋಡೆ ಇರುತ್ತದೆ ಎನ್ನುತ್ತಾರೆ. ನಾಗರಾಜಶೆಟ್ಟಿ ರವರು ಕಟ್ಟಿದ್ದ ಗೋಡೆಗೆ ಅನುಸಾರವಾಗಿ ಅವರ ಅನುಮತಿ ಮೇರೆಗೆ ನಮ್ಮ ಮಾವನವರು ಮನೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನಾಗರಾಜಶೆಟ್ಟಿ ರವರ ಮನೆಯವರು ಒಂದೆ ಒಂದು ವಿಷಯದಲ್ಲೂ ಅನುಸರಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಹಾಗೆ ಒಂದೇ ಒಂದು ವಿಷಯದಲ್ಲಿ ಅನುಸರಿಸಿಕೊಂಡಿಲ್ಲದಿದ್ದರೂ ನೆರೆಹೊರೆಯವರಾಗಿ ನಮ್ಮ ಮಾವನವರು 50 ವರ್ಷ ವಾಸವಾಗಿದ್ದರು ಎಂದರೆ ಸರಿಯಲ್ಲ. ಆ ಕಾಲದಿಂದಲೂ ಇಬ್ಬರೂ ಮಧ್ಯದ ಗೋಡೆಯನ್ನು ಜಂಟಿ ಗೋಡೆಯಂದೆ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

ನಾವು ಇರುವಂತಹ ಗಣೇಶ್ ಗುಡಿ ಬೀದಿ ಅತ್ಯಂತ ಜನ ಪೀಡಿತ ಪ್ರದೇಶ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಅತ್ಯಂತ ಹೆಚ್ಚು ಜನ ವಾಸಿಸುವ ಪ್ರದೇಶ ಎಂದರೆ ಸರಿ ಎಂದು ನುಡಿಯುತ್ತಾರೆ. ನಮ್ಮ ಮನೆಯ ಬಲಕ್ಕೆ ಅಂದರೆ ಪೂರ್ವಕ್ಕೆ ಜಯಚಂದ್ರ ಗುಪ್ತ ರವರ ಅಂಗಡಿ ಇದೆ ಎಂದರೆ ನಮ್ಮ ಮನೆ ಆದ 3 ಮನೆಗಳ ನಂತರ ಇದೆ ಎನ್ನುತ್ತಾರೆ. ಸದರಿ 3 ಮನೆಗಳು ಜನ ವಾಸಿಸುವ ಮನೆಗಳು ಎಂದರೆ ಸರಿ. ಬಿ.ಷಷ್ಯೂಲ್ ಪಶ್ಚಿಮಕ್ಕೆ 4 ಅಂಗಡಿಗಳು ಇವೆ. ನಮ್ಮ ಮನೆ ಎದುರುಗಡೆಗೆ ವೈಷ್ಯ ಸಮುದಾಯದ ಸೊಸೈಟಿ ಇದೆ. ಅದನ್ನು 2000 ನೇ ಸಾಲಿನಲ್ಲಿ ಕಟ್ಟಿರುತ್ತಾರೆ. ನಮ್ಮ ಮನೆ ಎದುರುಗಡೆ ಸೊಸೈಟಿ ಹೊರತು ಪಡಿಸಿ ವಾಸದ ಮನಗೆಳು ಇವೆ ಎಂದರೆ ಸರಿ.

ರಮೇಶ್ ರವರ ತಮ್ಮ ಹೆಚ್. ಎಂ. ವಾಸು ಎಂದರೆ ಸರಿ. ನಮ್ಮ ಮನೆಯ ಸಾಲಿನಲ್ಲಿ 20 ಮನೆಗಳ ನಂತರ ವಾಸು ರವರು ಹಿಟ್ಟಿನ ಗಿರಣಿ ನಡೆಸುತ್ತಾರೆ ಎಂದರೆ ಸರಿ. ವಾಸು ರವರ ಹೆಂಡತಿ ಹೆಸರು ಲಕ್ಷ್ಮಿ ಎಂದರೆ ಸರಿ. ಸದರಿ ಲಕ್ಷ್ಮಿ ರವರು ನನ್ನ ಆತ್ಮೀಯ ಸ್ನೇಹಿತೆ ಎಂದರೆ ಸರಿ. ಸದರಿ ವಾಸು ರವರು ನಡೆಸುತ್ತಿರುವ ಮಿಲ್ ನ ಅಕ್ಕಪಕ್ಕದಲ್ಲಿಯೂ ವಾಸದ ಮನೆಗಳು ಇವೆ ಎಂದರೆ ಸರಿ. ಹಿಟ್ಟು ಮಾಡಿಸುವುದು ಬಡವರು ಮತ್ತು ಮಧ್ಯಮ ವರ್ಗದವರು ಮಾತ್ರ ಎಂದರೆ ಸರಿಯಲ್ಲ. ಯಾವುದೆ ಧಾನ್ಯಗಳನ್ನು ಹಿಟ್ಟು ಮಾಡಿಸಲು ಸಾಧಾರಣ ಗಿರಣಿಗಳಲ್ಲಿಯೇ ಮಾಡಿಸಬೇಕಾಗುತ್ತದೆ ಎಂದರೆ ಸರಿ.

ಸದರಿ ದಾವಾ ಬಿ.ಷಡ್ಯೂಲ್ ಮಿಲ್1938 ರಲ್ಲಿ ಸ್ಥಾಪನೆ ಆದಂತಹ ಮಿಲ್ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಿ.ಷಡ್ಯೂಲ್ ಮಿಲ್ ಅನ್ನು ಮೊದಲು ಲೈಸನ್ಸ್ ತೆಗೆದುಕೊಂಡು ಬೇರೆಯವರು ನಡೆಸುತ್ತಿದ್ದು, 1956 ರಲ್ಲಿ ರಮೇಶ್ ರವರ ತಂದೆ ನಾಗರಾಜಶೆಟ್ಟಿ ರವರು ನಡೆಸಿಕೊಂಡು ಬರುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಸುತ್ತ ಮುತ್ತಲಿನಲ್ಲಿ ಬಿ.ಷಡ್ಯೂಲ್

ಮಿಲ್ ಮಾತ್ರ 1938 ರಿಂದಲೂ ಅಸ್ತಿತ್ವದಲ್ಲಿ ಇರುವುದು ಎಂದರೆ ಬೇರೆ ಗಿರಣಿಗಳು ಇವೆ ಎನ್ನುತ್ತಾರೆ. ಬಿ.ಷಢ್ಯೂಲ್ ಮಿಲ್ ಅಲ್ಲದೆ ಗುಪ್ತ ಸ್ಟೋರ್ ನ ಬಳಿ ಇರುವ ಮಿಲ್ ಮತ್ತು ಗಣಪತಿ ದೇವಸ್ಥಾನದ ಎದುರು ಎರಡೂ ಮಿಲ್ ಗಳು ಮೊದಲನಿಂದಲೂ ಇದ್ದವು ಆದರೆ ಈಗ ಇರುವುದಿಲ್ಲ. ಸದರಿ ಎರಡೂ ಮಿಲ್ ಗಳಿಗೆ ನಾವು ದೂರು ಕೊಟ್ಟಿಲ್ಲ. ನಮ್ಮ ಎದುರುಗಡೆ ಇದ್ದಂತಹ ಗುಪ್ತ ಸ್ಟೋರ್ ಪಕ್ಕದಲ್ಲಿ ಇರುವ ಮಿಲ್ ನಿಂದ ನಮಗೆ ತೊಂದರೆ ಆಗಿರಲಿಲ್ಲ. 1 ನೇ ಪ್ರತಿವಾದಿ ಮಿಲ್ ನಡೆಸುವ ರಮೇಶ್ ರವರಿಗೂ ಅವರ ತಮ್ಮ ವಾಸು ರವರ ನಡುವೆ ಒಳ್ಳೆಯ ಸಂಬಂಧ ಇಲ್ಲ ಭಿನ್ನಾಭಿಪ್ರಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಸು ಮತ್ತು ಲಕ್ಷ್ಮಿ ರವರು 1 ನೇ ಪ್ರತಿವಾದಿ ರಮೇಶ್ ರವರ ಮೇಲಿನ ಕೋಪದಿಂದ ನನ್ನನ್ನು ದಾಳವಾಗಿ ಇರಿಸಿಕೊಂಡು ಸುಳ್ಳು ಕೇಸ್ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮಾವನ 8 ಜನ ಮಕ್ಕಳಲ್ಲಿ 6 ಜನ ಪದವೀಧರರು, ಇನ್ನಿಬ್ಬರು ಸಾಮಾನ್ಯ ವಿಧ್ಯಾಭ್ಯಾಸ ಮಾಡಿರುತ್ತಾರೆ. ಅವರೆಲ್ಲರೂ ಎ ಷಢ್ಯೂಲ್ ಮನೆಯಲ್ಲೆ ತಂದೆ ತಾಯಿ ಜೊತೆ ಇದ್ದುಕೊಂಡು ವಿಧ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಅತ್ತೆ ಮಾವ ನಾಗರಾಜಶೆಟ್ಟಿ ರವರು ಮಿಲ್ ನಡೆಸುತ್ತಿರುವುದರಿಂದ ತೊಂದರೆ ಆಗುತ್ತದೆ ಎಂದು ಬೇಕಾದಷ್ಟು ಸಲ ತಕರಾರು ಮಾಡಿದ್ದರು ಎನ್ನುತ್ತಾರೆ. 1991 ರಿಂದ ಅತ್ತೆ ಮಾವ ಹಿಟ್ಟಿನ ಗಿರಣಿಯ ಬಗ್ಗೆ ತಕರಾರು ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿದು, ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವಲ್ಲದೆ ನಮ್ಮ ಮನೆಯ ಅಕ್ಕ ಪಕ್ಕದವರು ಸದರಿ ಮಿಲ್ ನಡೆಸುವುದರಿಂದ ತೊಂದರೆ ಆಗುತ್ತದೆ ಎಂದು ನೆರೆಹೊರೆಯರಾದ ತಿಮ್ಮಪ್ಪ, ಗೌರಮ್ಮ, ಜಗದೀಶ, ಭಾಗ್ಯ, ಹೇಮಾ, ಲಕ್ಷ್ಮಿ, ಇನ್ನೊಬ್ಬ ಗೌರಮ್ಮ, ಕಮಲಮ್ಮ, ಇನ್ನೊಬ್ಬ ಲಕ್ಷ್ಮಿ ಹೀಗೆ ಸುಮಾರು 25 ಜನ ಇರುತ್ತಾರೆ. ನಾವು ಮಾಡಿದಂತಹ ತಕರಾರು

ಅರ್ಜಿಗೆ ಸದರಿ 25 ಜನರು ಸಹಿ ಮಾಡಿ ಕೊಟ್ಟಿರುತ್ತಾರೆ. ಜೊತೆಗೆ ಅವರ ಮಕ್ಕಳು, ಸೊಸೆಯಂದಿರು ಸಹ ಸಹಿ ಮಾಡಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಆ ರೀತಿಯ ಪ್ಲೋರ್ ಮಿಲ್ ಗಳು ಹುಣಸೂರಿನಲ್ಲಿ ಎಷ್ಟಿದೆ ಎಂದು ನನಗೆ ಅಂದಾಜು ಇಲ್ಲ.

1 ನೇ ಪ್ರತಿವಾದಿ ಅವರ ಮಿಲ್ ಅನ್ನು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಹೊಚ್ಚ ಹೊಸ ರೀತಿಯಲ್ಲಿ ಇರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಪುನಃ 2021 ರಲ್ಲಿ ಸದರಿ ಹಿಟ್ಟಿನ ಗಿರಣಿಯಲ್ಲಿ ಏನೋ ಹೊಸ ಮಿಷಿನ್ ಹಾಕಿಸಿಕೊಂಡ ಬಗ್ಗೆ ಹೇಳಿರುತ್ತಾರೆ ಆದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಜಂಟಿ ಗೋಡೆಗೆ ಹೊಂದಿಕೊಂಡಂತೆ ಒಳಗಡೆ ಇನ್ನೊಂದು 9 ಇಂಚಿನ ಗೋಡೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿ 2022 ರಲ್ಲಿ ಹಾಕಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಪಶ್ಚಿಮದ ಗೋಡೆಗೂ ನಮ್ಮಗೂ ಯಾವುದೆ ಹಕ್ಕಿಲ್ಲ ಅದನ್ನು ನಾಗರಾಜಶೆಟ್ಟಿ ರವರು ಕಟ್ಟಿಕೊಂಡಿದ್ದು ಎಂದರೆ ಸರಿಯಲ್ಲ. ನಮ್ಮ ಮಾವ ಮತ್ತು ಅತ್ತೆಯವರ ಹೆಸರಿನಲ್ಲಿ ಆಸ್ತಿಗಳು ಇವೆ ಎಂದರೆ ಎ ಷಡ್ಯೂಲ್ ಆಸ್ತಿ ಮಾವನ ಹೆಸರಿನಲ್ಲಿ, ಇನ್ನೊಂದು ಆಸ್ತಿ ಅತ್ತೆ ಹೆಸರಿನಲ್ಲಿ ಇದೆ. ನನ್ನ ಗಂಡನ ಅಣ್ಣ ವಿವೇಕಾನಂದ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಮತ್ತು ನಮ್ಮ ಸಂಬಂಧ ಚೆನ್ನಾಗಿತ್ತು ಎಂದರೆ ತುಂಬಾ ಚೆನ್ನಾಗಿದೆ ಎನ್ನುತ್ತಾರೆ. ನನ್ನ ಗಂಡನ ಸಹೋದರಿಯರು ನನ್ನ ಗಂಡನ ಮತ್ತು ಅವರ ಅಣ್ಣನ ವಿರುದ್ಧ ಪಾಲು ಕೋರಿ ಹುಣಸೂರಿನ ಸಿವಿಲ್ ನ್ಯಾಯಾಲಯದಲ್ಲಿ ಕೇಸು ಹಾಕಿದ್ದರು ಎಂದರೆ ಸರಿ. ಇವತ್ತಿನವರೆಗೂ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯವರ ನಡುವೆ ಪಾಲು ಆಗಲು ಅವಕಾಶ ಮಾಡಿಕೊಟ್ಟಿಲ್ಲ ಎಂದರೆ ಸಾಕ್ಷಿ ಅದು ನಮ್ಮ ಕೈಯಲ್ಲಿ ಇಲ್ಲ ಎನ್ನುತ್ತಾರೆ.

ನಾನು ಎ ಷಡ್ಯೂಲ್ ಸ್ವತ್ತಿನ ಸಂಪೂರ್ಣ ಸ್ವಾಧೀನದಲ್ಲಿ ಇದ್ದೇನೆ ಎಂದರೆ, ಸಾಕ್ಷಿ ನಾನು ಬಂದಾಗಿನಿಂದಲೂ ಅದೆ ಮನೆಯಲ್ಲಿ ವಾಸ ಇದ್ದೇನೆ ಎಂದು ನುಡಿಯುತ್ತಾರೆ. ನನ್ನ ಗಂಡ ಶಬ್ದ ಮಾಲಿನ್ಯದಿಂದ ತೀರಿಕೊಂಡರು ಎಂದು ದಾಖಲೆ ಹಾಜರು ಪಡಿಸಿದ್ದೇನೆ, ಅದರೆ ನಿಖರವಾಗಿ ಶಬ್ದ ಮಾಲಿನ್ಯದಿಂದಲೇ ತೀರಿಕೊಂಡರು ಎಂಬ ಬಗ್ಗೆ ದಾಖಲೆ ಇಲ್ಲ ಎನ್ನುತ್ತಾರೆ. ಬಿ ಷಡ್ಯೂಲ್ ಸ್ವತ್ತಿನ ಸುತ್ತ ಮುತ್ತಲೂ ಯಾರಾದರೂ ಶಬ್ದ ಮಾಲಿನ್ಯದಿಂದ ಮತ್ತು ವಾಯು ಮಾಲಿನ್ಯದಿಂದ ತೀರಿಕೊಂಡ ಬಗ್ಗೆ ದಾಖಲೆ ಇಲ್ಲ. ನಾನು ಹೇಳಿದ ಹಾಗೆ ಬಿ. ಷಡ್ಯೂಲ್ ಸ್ವತ್ತಿನಲ್ಲಿ ಮಿಲ್ ನಡೆಸುತ್ತಿರುವುದರಿಂದ ಯಾರು ವಿದ್ಯಾಭ್ಯಾಸ ಮಾಡುತಿರಲಿಲ್ಲ ಎಂದರೆ ಮಾಡುತ್ತಿದ್ದಾರೆ ಆದರೆ ಸಂಕಟದಿಂದ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲೂ 6 ಜನ ಪದವಿಯನ್ನು ಹಾಗೂ ಪದವಿಯ ಸಾಮಾನ್ಯ ವಿದ್ಯಾಭ್ಯಾಸವನ್ನು ಶಬ್ದ ಮಾಲೀನ್ಯದಲ್ಲೆ ನಡೆಸಿದ್ದಾರೆ. ಹಿಟ್ಟಿನ ಗಿರಣಿ ನಡೆಸಿ ಶಬ್ದ ಮಾಲಿನ್ಯದ ದೂರು ಕೊಟ್ಟ ಬಗ್ಗೆ ನಿದರ್ಶನ ಇದೆ, ದೂರು ಕೊಟ್ಟಿಲ್ಲ ಎನ್ನುತ್ತಾರೆ. ಆ ಬಗ್ಗೆ ವೇಲೂ ಎಂಬುವವರು ಪೌರಾಯುಕ್ತರಿಗೆ ದೂರು ಕೊಟ್ಟಿದ್ದರು. ಆ ರೀತ್ಯ ದೂರನ್ನು ಕುಂದು ಕೊರತೆ ವಿಭಾಗದಲ್ಲಿ ದೂರು ಹಾಕಿರುತ್ತೇವೆ ಎಂದು ಹೇಳಿರುತ್ತಾರೆ ಆದರೆ 20–25 ವರ್ಷಗಳ ಹಿಂದೆ ದಾಖಲೆ ಕೊಡುತ್ತಿರಲಿಲ್ಲ ಎನ್ನುತ್ತಾರೆ. ಇದುವರೆಗೂ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಆಗುತ್ತದೆ ಎಂದು ಯಾವುದೆ ದೂರನ್ನು ಕೊಟ್ಟಿದ್ದಿಲ್ಲ ಎಂದರೆ ಅವರೆಲ್ಲರೂ ನನಗೆ ಸಪೋರ್ಟ ಮಾಡಿದ್ದರು ಎನ್ನುತ್ತಾರೆ.

1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಅವರ ಮೇಲೆ ಜಿದ್ದು ತೀರಿಸಿಕೊಳ್ಳಲು ಸುಳ್ಳು ಸುಳ್ಳು ದೂರು ಕೊಡುತ್ತಾ ಬಂದಿರುತ್ತಾರೆ ಅದಕ್ಕೆ ನಾನು ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ತಕರಾರು ಅರ್ಜಿಗಳನ್ನು ಪೌರಾಯುಕ್ತರಿಗೆ, ಎ.ಸಿ, ಡಿ,ಸಿ, ಕೆ.ಇ.ಡಿ, ಮಾನವ ಹಕ್ಕುಗಳ ಆಯೋಗ, ಲೋಕಾಯುಕ್ತ, ಪೌರಾಡಳಿತ ಇಲಾಖೆ, ಸಿ.ಎಂ. ರಾಜ್ಯಪಾಲರು ಮತ್ತು ಬೆಸ್ಕಾಂ, ಒಟ್ಟು

15 ಇಲಾಖೆಗಳಿಗೆ ಕೊಟ್ಟಿರುತ್ತೇನೆ. ಇದೆ ನಿಮ್ಮ ಕೆಲಸ ಎಂದರೆ, ತೊಂದರೆ ಆಗುತ್ತಿದ್ದರಿಂದ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಹೀಗೆ ಪದೆ ಪದೆ ಅರ್ಜಿಗಳನ್ನು ಅಧಿಕಾರಿಗೆ ಬರೆಯುತ್ತಾ 1 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.